2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ
ಚಿಕ್ಕಮಗಳೂರು

ಸತ್ರ ಮೊಕದ್ದಮೆ ನಂಃ**2/2012**

| | | | |
|---|---|---|---|
| ಸಾಕ್ಷಿದಾರರ ಹೆಸರು | - ಶ್ರೀನಿವಾಸ | | ಪಿಡಬ್ಲೂ - 38 |
| ತಂದೆಯ ಹೆಸರು | - ಸುಬ್ಬಪ್ಪ | | ಸಿಡಬ್ಲೂ - 2 |
| ವಯಸ್ಸು | - 60 ವರ್ಷ | | |
| ಉದ್ಯೋಗ | - ವ್ಯವಸಾಯ | | |
| ವಾಸ ಸ್ಥಳ | - ಹಕ್ಕರೆ ಕೊಪ್ಪ, ಸಾಗರ ತಾಃ | | |

ದಿನಾಂಕಃ 19-01-2021 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ ಮಾನ್ಯ ಪಿ.ಪಿ. ರವರಿಂದ -

1. ನನಗೆ ಸಹಿ ಮಾಡಲು ಬರುತ್ತದೆ. ನನ್ನ ಸಹಿ ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಗೆ ನಿ.ಪಿ.3 ಮಹಜರ್ ನ್ನು ತೋರಿಸಿದ್ದು ಅದರಲ್ಲಿ ಇರುವ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಸದರಿ ಸಾಕ್ಷಿಯ ಸಹಿಯನ್ನು ನಿ.ಪಿ.3(ಇ) ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ನಾನು 10 ವರ್ಷಗಳ ಹಿಂದೆ ಉಳ್ಳೂರಿನ ಕೆರೆಯ ಹತ್ತಿರ ಮಾಡಿರುತ್ತೇನೆ. ಆಗ ಸಮಯ ಮಧ್ಯಾಹ್ನದ ಹೊತ್ತು ಆಗಿತ್ತು. ಜನ ಗುಂಪಾಗಿ ಕೂಡಿದ್ದರಿಂದ ನಾನು ಅಲ್ಲಿಗೆ ಹೋಗಿರುತ್ತೇನೆ. ನಾನು ಅಲ್ಲಿ ಹೋಗಿ ನೋಡಿದಾಗ ಅಲ್ಲಿ ಒಂದು ಮೃತ ದೇಹ ಕೆರೆಯಲ್ಲಿ ಇತ್ತು. ಕೆರೆಯಲ್ಲಿ ಬಿದ್ದ ಶವವನ್ನು ಯಾರು ತೋರಿಸಿದರು ನನಗೆ ಗೊತ್ತಿಲ್ಲ. ಸದರಿ ಶವವನ್ನು ಊರಿನಲ್ಲಿ ಇದ್ದವರು ನೀರಿನಿಂದ ಎತ್ತಿರುತ್ತಾರೆ, ಆದರೆ ಯಾರು ಎತ್ತಿರುತ್ತಾರೆ ಎಂದು ನನಗೆ ಗೊತ್ತಿಲ್ಲ.

ನಂತರ ಪೊಲೀಸರು ಸದರಿ ಶವದ ಮಹಜರು ಮಾಡಿದ್ದು, ನನಗೆ ಸಹಿ ಹಾಕು ಎಂದು ಹೇಳಿದ್ದರಿಂದ ಸಹಿ ಮಾಡಿರುತ್ತೇನೆ. ಶವ ಅಲ್ಲದೇ ಬೇರೆ ಯಾವ ವಸ್ತುಗಳನ್ನು ನೀರಿನಿಂದ ಎತ್ತಿರುವ ಬಗ್ಗೆ ನನಗೆ ಗೊತ್ತಿಲ್ಲ.

2. ಸಾಕ್ಷಿಗೆ ಇನ್ನೊಂದು ದಾಖಲೆಯನ್ನು ತೋರಿಸಿದ್ದು, ಅದರಲ್ಲಿ ಇರುವ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಸದರಿ ದಾಖಲೆಯು ಶವ ಪಂಚನಾಮೆಯಾಗಿದ್ದು, ಅದನ್ನು ಈಗಾಗಲೇ ನಿ.ಪಿ.10 ಎಂದು ಗುರುತಿಸಲಾಗಿದ್ದು ಮತ್ತು ಅದರ ಮೇಲೆ ಇರುವ ಸಾಕ್ಷಿಯ ಸಹಿಯನ್ನು ನಿ.ಪಿ.10(ಡಿ) ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ಸಹ ನಾನು ಪೊಲೀಸರು ಹೇಳಿದ್ದರಿಂದ ಮಾಡಿರುತ್ತೇನೆ. ನಾನು ಮೃತ ದೇಹವನ್ನು ನೋಡಿದ್ದು, ಅದು ಸಂಪೂರ್ಣ ಊತವಾಗಿತ್ತು. ಅದರ ಮೇಲೆ ಏನು ಗಾಯಗಳು ಆಗಿದ್ದವು ಎಂದು ನನಗೆ ಹೇಳಲು ಬರುವುದಿಲ್ಲ. ಸದರಿ 2 ದಾಖಲೆಗಳಿಗೆ ನಾನು ಸಹಿ ಮಾಡುವಾಗ ಬೇರೆ ಯಾರು ಸಹಿ ಮಾಡಿರುತ್ತಾರೆ ಎಂಬ ಬಗ್ಗೆ ನನಗೆ ಹೇಳಲು ಆಗುವುದಿಲ್ಲ. ನಾನು ಮೃತ ದೇಹವನ್ನು ನೋಡಿದಾಗ ಅವರು ಹೇಗೆ ಮೃತಪಟ್ಟಿರಬಹುದು ಎಂದು ವಿಚಾರಿಸಿರುವುದಿಲ್ಲ. ಸದರಿ ಮೃತ ದೇಹವು ಹೆಣ್ಣು ಮಗಳದ್ದು ಆಗಿತ್ತು. ಸದರಿ ಮೃತ ಹೆಣ್ಣು ಮಗಳು ಎಲ್ಲಿಯವರು ಅವರ ಹೆಸರು ಏನು ಎಂಬ ಬಗ್ಗೆ ನನಗೆ ತಿಳಿದಿರುವುದಿಲ್ಲ.

(ಈ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಅಭಿಯೋಜಕರು ಅನುಮತಿ ಕೇಳಿರುತ್ತಾರೆ ದಾಖಲೆಗಳನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು)

<u>ಪಾಟೀ ಸವಾಲು ಮಾನ್ಯ ಅಭಿಯೋಜಕರಿಂದಃ-</u>

3. ನಾನು ಸದರಿ ಸ್ಥಳಕ್ಕೆ ಹೋದೆ ಎಂದು ಹೇಳಲಾದ ದಿನ ದಿಃ 05.07.2011 ಎಂದರೆ ನನಗೆ ನೆನಪಿರುವುದಿಲ್ಲ. ದಿಃ 05.07.2011 ರಂದು ನನಗೂ, ಚಾಸಾ.3 ಮತ್ತು 4 ರವರಿಗೂ ಸದರಿ ಕೆರೆಯಲ್ಲಿ ಮೃತ ದೇಹವನ್ನು ತೆಗೆಯುವ ಸಲುವಾಗಿ ಮಹಜರ್ ಮಾಡುವ ಸಲುವಾಗಿ ಪಂಚರಾಗಿ ಬನ್ನಿ ಎಂದು ನಮ್ಮನ್ನು ಕರೆದಿದ್ದರು ಎಂದರೆ ಸರಿಯಲ್ಲ. ಅದೇ ದಿನ ಸಂಜೆ 3.30 ಗಂಟೆಗೆ ಈ ಪ್ರಕರಣದ ಪಿರ್ಯಾದಿಯವರಾದ ವೆಂಕಪ್ಪಗೌಡ ರವರು ಸ್ಥಳದಲ್ಲಿ ಹಾಜರಿದ್ದು ಮೃತ ದೇಹವು ಕೆರೆಯಲ್ಲಿ ಇರುವ ಬಗ್ಗೆ ತೋರಿಸಿರುತ್ತಾರೆ ಮತ್ತು ನಮ್ಮ ಸಮಕ್ಷಮದಲ್ಲಿ ತಿಮ್ಮಣ್ಣ ಎಂಬುವವರನ್ನು ಕರೆಸಿ ಸದರಿ ಮೃತ ದೇಹವನ್ನು ನೀರಿನಿಂದ ಹೊರ ತೆಗೆಸಿರುತ್ತಾರೆ ಎಂದರೆ ಇರಬಹುದು. ಅದೇ ರೀತಿ ತಿಮ್ಮಣ್ಣ ರವರು ಮೃತ ದೇಹವನ್ನು ನೀರಿನಿಂದ ತೆಗೆಯಲು ಹೋದಾಗ ಮೃತ ದೇಹದ ಹತ್ತಿರ ಒಂದು ಲೂನಾ ದ್ವಿಚಕ್ರ ವಾಹನ ಇತ್ತು ಎಂದು ಹೇಳಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ತಿಮ್ಮಣ್ಣ ಇವರು ನನ್ನ ಸಮಕ್ಷಮ ಹೆಂಗಸಿನ ಮೃತದೇಹ ಮತ್ತು ಸದರಿ ಲೂನಾ ವನ್ನು ಹೊರ ತೆಗೆದರು ಎಂದರೆ ಸರಿಯಲ್ಲ. ನನ್ನ ಸಮಕ್ಷಮ ನಿ.ಪಿ.3 ಮಹಜರ್ ಕಾಲದಲ್ಲಿ ಸದರಿ ಲೂನಾ ವಾಹನದ ಸಂಖ್ಯೆ ಕೆ.ಎ.14/ಹೆಚ್.4447 ವಾಹನವನ್ನು ವಶಕ್ಕೆ ಪಡೆದು ಸದರಿ ಸ್ಥಳದಲ್ಲಿ ಮಹಜರ್ ಬರೆದು ನನ್ನ ಸಹಿ ಪಡೆದಿರುತ್ತಾರೆ ಎಂದರೆ ಸರಿಯಲ್ಲ. ನಾನು ಆ ಸಮಯದಲ್ಲಿ ಮೃತ ದೇಹ ಮತ್ತು ಲೂನಾ ವಾಹನವನ್ನು ನಾನು ನೋಡಿರುತ್ತೇನೆ ಎಂದರೆ ಸರಿಯಲ್ಲ. ಅದೇ ದಿನ ಸಂಜೆ 4.15 ರಿಂದ 6.15 ರವರೆಗೆ ಸದರಿ ಮೃತ ದೇಹದ ಮೇಲೆ ಶವ ಪಂಚನಾಮೆಯನ್ನು ನಮ್ಮ

ಸಮಕ್ಷಮ ನಿ.ಪಿ.10 ರಂತೆ ಜರುಗಿಸಿರುತ್ತಾರೆ ಎಂದರೆ ಸರಿಯಲ್ಲ. ಹಾಗೂ ಸದರಿ ಶವ ಪಂಚನಾಮೆ ಕಾಲಕ್ಕೆ ನಾನು ಸ್ಥಳದಲ್ಲಿ ಹಾಜರಿದ್ದು ಮೃತಳ ಎಡ ಅಂಗೈ ಮೇಲೆ ಆಯುಧದಿಂದ ಆದಂತೆ ಇದ್ದ ಗಾಯ ಕಂಡು ಬಂದಿರುತ್ತದೆ ಎಂದರೆ ಸರಿಯಲ್ಲ. ಹಾಗೂ ಸದರಿ ಹೆಂಗಸನ್ನು ಎಲ್ಲಿಯೋ ಕೊಲೆ ಮಾಡಿ ಹಗ್ಗದಿಂದ ಬಿಗಿದು ಸದರಿ ಕೃತ್ಯವನ್ನು ಮರೆಮಾಚಲು ಸುಮಾರು 10 ರಿಂದ 15 ದಿನಗಳ ಹಿಂದೆ ಅವಳನ್ನು ನೀರಿನಲ್ಲಿ ಮುಳುಗಿಸಿದಂತೆ ಕಂಡು ಬಂದಿರುತ್ತದೆ ಎಂದು ಶವ ಪಂಚನಾಮೆಯಲ್ಲಿ ನನ್ನ ಅಭಿಪ್ರಾಯ ಕೊಡಲಾಗಿರುತ್ತದೆ ಎಂದರೆ ಸರಿಯಲ್ಲ. ಈಗ ತೋರಿಸಿದ ನಿ.ಪಿ.4 ಪೋಟೋ ಕಂಡು ಬರುವ ಲೂನಾವನ್ನು ಆ ದಿನ ನನ್ನ ಸಮಕ್ಷಮ ನೀರಿನಿಂದ ಎತ್ತಿರುವ ವಾಹನವಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ನಿ.ಪಿ.5 ಮತ್ತು 6 ಪೋಟೋಗಳಲ್ಲಿ ಇರುವ ಹೆಂಗಸಿನ ಮೃತ ದೇಹವು ಆ ದಿನ ನನ್ನ ಸಮಕ್ಷಮ ನೀರಿನಿಂದ ಎತ್ತಿದ ಮೃತ ದೇಹವು ಎಂದರೆ ಸರಿ. ಅದೇ ರೀತಿ ನಿ.ಪಿ.7 ರಿಂದ 9 ಪೋಟೋಗಳಲ್ಲಿ ನಾನು ಇರುವುದು ಕಂಡು ಬರುತ್ತದೆ. ಸದರಿ ಪೋಟೋಗಳನ್ನು ನಿ.ಪಿ.3 ಮತ್ತು 10 ಸಮಯದಲ್ಲಿ ತೆಗೆದ ಪೋಟೋಗಳು ಆಗಿರುತ್ತವೆ ಎಂದರೆ ಗೊತ್ತಿಲ್ಲ.

4. ನನಗೆ ನಿ.ಪಿ.3 ಮತ್ತು 10 ಹಾಗೂ ನಿ.ಪಿ.4 ರಿಂದ 9 ಪೋಟೋಗಳಲ್ಲಿ ಇರುವ ಸಂಗತಿಗಳು ಖುದ್ದು ಗೊತ್ತಿದ್ದು ಸ್ಥಳದಲ್ಲಿಯೇ ನಿ.ಪಿ.3 ಮತ್ತು 10 ಕ್ಕೆ ಸಹಿ ಮಾಡಿದ್ದರು ಕೂಡ ಆರೋಪಿಗೆ ಸಹಾಯ ಮಾಡಲೆಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲು ಶ್ರೀ ಪಿ.ಇ.ಎಸ್. ವಕೀಲರಿಂದ – ಆರೋಪಿತನ ಪರವಾಗಿ

5. ನಾನು ಪೊಲೀಸರ ಕೋರಿಕೆಯ ಮೇರೆಗೆ ನಿ.ಪಿ.3 ಮತ್ತು 10 ದಾಖಲೆಗಳಿಗೆ ಸಹಿ ಮಾಡಿರುತ್ತೇನೆ ಎಂದರೆ ಸರಿ. ಸಹಿಯನ್ನು ಬಿಟ್ಟರೇ ಉಳಿದ ವಿಷಯಗಳು ನನಗೆ ಗೊತ್ತಿಲ್ಲ ಎಂದರೆ ಸರಿ. ನನಗೆ ಪೊಲೀಸರು ಕೃತ್ಯ ಸ್ಥಳಕ್ಕೆ ಬರಬೇಕೆಂದು ನೋಟೀಸು ನೀಡಿರಲಿಲ್ಲ ಎಂದರೆ ಸರಿ. ಸದರಿ ಮೃತ ದೇಹವನ್ನು ನಾನು ನೋಡಿದಾಗ ಅದು ಪೂರ್ತಿ ಗುರುತು ಹಿಡಿಯಲಾರದಷ್ಟು ಊತವಾಗಿತ್ತು.

ಮರು ವಿಚಾರಣೆ ಇಲ್ಲ

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)
ಓ.ಹೇ.ಕೇ.ಸ.ಇ.ಎ.ಒ.

Sd/-
(ಮಂಜುನಾಥ ಸಂಗ್ರೇಶಿ)
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಮಾ